

# ಆಕ್ಟೋಪಸ್ ಮರ



ಆಕ್ಟೋಪಸ್ ಅನ್ನೇ ಹೋಲುವ ವಿಚಿತ್ರ ಮರ ಅಮೆರಿಕದ ಒರೆಗಾನ್ ತೀರದಲ್ಲಿದೆ. ಮೇಲಕ್ಕೆ ದೊಡ್ಡ ದೊಡ್ಡ ಕೊಂಬೆಗಳನ್ನು ಚಾಚಿಕೊಂಡಿರುವ ಈ ಮರದ ಹೆಸರು ಸಿಟ್ಕಾ ಸ್ಪ್ರೂಸ್. ಕೇಪ್ ಮೀರಸ್ ಲೈಟ್ ಹೌಸ್‌ನಿಂದ ಸುಮಾರು ನೂರು ಅಡಿಗಳಷ್ಟು ದೂರದಲ್ಲಿದೆ ಈ ಮರ.

ಈ ಮರದ ವೈಜ್ಞಾನಿಕ ಹೆಸರು ಪಿಸಿಯಾ ಸಿಚೆನ್ಸಿಸ್. ಅಂದಾಜು 46 ಅಡಿ ಸುತ್ತಳತೆಯುಳ್ಳ ಈ ಮರಕ್ಕೆ ಬೊಡ್ಡೆಯೇ ಇಲ್ಲ! ಈ ಮರವು ಮೇಲ್ಮುಖವಾಗಿ ಬೆಳೆಯುವುದಕ್ಕಿಂತ ಮುಂಚೆಯೇ ಅಚ್ಚರಿಗೊಳಿಸುವಂತೆ 16 ಅಡಿಗಳಷ್ಟು ಸಮಾನಾಂತರವಾಗಿ ಬೆಳೆದು 6 ಟಿಸಿಲುಗಳನ್ನು ಹೊಂದಿದೆ. ಸುಮಾರು 105 ಅಡಿಗಷ್ಟು ಎತ್ತರವಿರುವ ಈ ಮರವು ಸ್ವಾಭಾವಿಕವಾಗಿಯೇ ಹೀಗೆ ಬೆಳೆದಿಯೋ ಅಥವಾ ಇಲ್ಲಿದ್ದ ಮೂಲ ನಿವಾಸಿಗಳಿಂದ ಈ ರೀತಿ ಆಗಿದೆಯೋ ಎಂಬುದು ಪ್ರಶ್ನೆ.

ಆಕ್ಟೋಪಸ್ ಮರ 200 ರಿಂದ 300 ವರ್ಷ ಹಳೆಯದು ಎಂದು ನಂಬಲಾಗಿದೆ. ಯಾವಾಗ ಆಕ್ಟೋಪಸ್ ಮರವು ರಿಪ್ಲಿಸ್ ಬಿಲಿವ್ ಇಟ್ ನಾಟ್ (ಅಚ್ಚರಿಗಳ ಪುಸ್ತಕ)ದಲ್ಲಿ ಕಾಣಿಸಿಕೊಂಡಿತೋ ಆವಾಗಿನಿಂದ ಈ ಮರವನ್ನು ಆಧುನಿಕ ವಿಶ್ವದ ಅದ್ಭುತಗಳಲ್ಲಿ ಒಂದು ಎಂದೇ ವರ್ಣಿಸಲಾಗುತ್ತಿದೆ. ದೈತ್ಯ ಗಾತ್ರದಲ್ಲಿದ್ದು ವಿಲಕ್ಷಣವಾಗಿ ಕಾಣುವುದರಿಂದ ರಾಕ್ಷಸಿ ಮರ ಎಂದೂ ಹಾಗೂ ಪವಿತ್ರ ಮರವೆಂದು ಭಾವಿಸಿದ್ದ ಹಿಂದಿನ ತಲೆಮಾರಿನ ಹಿರಿಯರು ಇದರ ಮೇಲೆ ಕುಳಿತು ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದರಂತೆ. ಇದನ್ನು ಕೌನ್ಸಿಲ್ ಟ್ರೀ ಎಂದೂ ಇದನ್ನು ಕರೆಯಲಾಗುತ್ತದೆ. ಕೇವಲ ಚಾರಿತ್ರಿಕವಾಗಿ ಅಲ್ಲ, ಸಸ್ಯ ವೈಜ್ಞಾನಿಕವಾಗಿಯೂ ಅಚ್ಚರಿ ಮೂಡಿಸುತ್ತಿರುವ ಈ ವಿಶಿಷ್ಟ ಮರವನ್ನು ವೀಕ್ಷಣೆ ಮಾಡಲೆಂದೇ ಹಲವಾರು ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರಂತೆ.

■ **ಪ್ರಿಯಾಂಕ ವಿ. ಹೆಚ್.**